ಕರ್ನಾಟಕ ಸರ್ಕಾರ

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ದ್ವಿತೀಯ ಪಿಯುಸಿ ಪೂರಕ ಪರೀಕ್ಷೆ ಮೇ/ಜೂನ್ 2023

ಕೀಲಿಕೈ ಉತ್ತರಗಳು

ವಿಷಯ: ಕನ್ನಡ  ವಿಷಯ ಸಂಕೇತ:(01)

| ಪ್ರ.ಸಂ | ಕೀಲಿಕೈ ಉತ್ತರಗಳು | ಅಂಕಗಳು |
|---|---|---|
| 01 | ಇ) ಲಕ್ಷ್ಮಣ | 1 |
| 02 | ಆ) ಪುಷ್ಪ | 1 |
| 03 | ಇ) ದ್ರೌಪದಿ | 1 |
| 04 | ಇ) ನಂಬಿರದ ದೇವರಲ್ಲಿ | 1 |
| 05 | ಈ) ನಿಶಾಶರ್ಮ | 1 |
| 06 | ಆ) ಶಾಂಭವಿ | 1 |
| 07 | ಅ)ಮನೋರಮೆ | 1 |
| 08 | ಆ) ಗೌರಿ | 1 |
| 09 | ಇ) 5ಜನ ಸಾವನಪ್ಪುತ್ತಾರೆ | 1 |
| 10 | ಇ) ತಿಪ್ಪಣ್ಣ | 1 |
| 11 | ಅ) ಜಾಲಿಯ ಮರ  □  ದುರ್ಜನರು<br>ಆ) ದ.ರಾ. ಬೇಂದ್ರೆ  □  ಅಂಬಿಕಾತನಯ ದತ್ತ<br>ಇ) ಉತ್ತಮರ ಗೆಳೆತನ  –  ಪುತ್ಥಳಿ ಬಂಗಾರ<br>ಈ) ಪುಲಿಗೆರೆ ಸೋಮನಾಥ  –  ಸೋಮೇಶ್ವರ ಶತಕ<br>ಉ) ಟಿ. ಯಲ್ಲಪ್ಪ  □  ಚಿಟ್ಟೆ ಮತ್ತು ಜೀವಯಾನ | 5 |
| 12 | ಅ) ಡಾ|| ತಿಮ್ಮಪ್ಪ<br>ಆ) ಸಿಂಹಬಾಲದ ಕೋತಿ<br>ಇ) ಬಾದ್ಧದರ್ಮ<br>ಈ) ಮಗು<br>ಉ) ಚಂದ್ರಭವನ | 5 |
| 13 | ಧರ್ಮರಾಯ, ಭೀಮ, ಅರ್ಜುನ, ನಕುಲ – ಸಹದೇವ | 2 |
| 14 | ಊರಹಂದಿಗೆ, ನಾರುವ ದುರ್ಗಂಧ ಬಿಡದ ಕಾರಣ. | 2 |
| 15 | ಮಗುವು ಕ್ಯೂ ನಿಲ್ಲುವುದನ್ನು, ಪುಟ್ಪಾತಿನಲ್ಲೇ ಸಂಚರಿಸ ಬೇಕೆಂಬುದನ್ನು, ರಸ್ತೆ ದಾಟುವಾಗ ಎಚ್ಚರದಿಂದರಬೇಕೆಂಬುದನ್ನು ಎಲ್ಲಿಯು ನಿಲ್ಲದೆ ಅವರಿವರ ಮುನ್ನುಗ್ಗಿ ಬೇರೂರು ಹೀರುವುದನ್ನು | 2 |
| 16 | ಮನೆದೇವರಾದ ಗುಟ್ಯೆಮಲ್ಲಪ್ಪನನ್ನು ಕುರಿತು ತನ್ನ ಸೊಸೆಗೆ ಹೊರಗಿನ ಕೆಲಸ ಬಂದಲ್ಲಿ ನಿನ್ನ ಗಟ್ಟಪಾದಕ್ಕೆ ಒಂದು ಹೂ ಹೆಚ್ಚಿಗೆ ಇಡುತೀನಿ ಎಂದು ಪ್ರಾರ್ಥನೆ. | 2 |
| 17 | ಕೊನೆಯಿಲ್ಲದ ನಗು, ಮೊನೆಯಿಲ್ಲದ ಆಕಾಶದಲ್ಲಿ ಕಾರ್ಮೋಡ ಕವಿಸುವ ನಗು, ಹೊಳೆ ಹರಿಸುವ ನಗು, ಬೆಳೆ ಬೆಳೆಸುವ ನಗು, ದನ, ಜನ ಎಲ್ಲರೂ ಕೂಡಿ ನಗುವ ನಗು. | 2 |
| 18 | ಡಾ|| ತಿಮ್ಮಪ್ಪ ಬಸಲಿಂಗನಿಗೆ "ನಿನ್ನ ಕಣ್ಣು ಸರಿ ಹೋಗುತ್ತೆ ಆದರೆ ಅಪರೇಷನ್ ಆಗಬೇಕು ಪರವಾಗಿಲ್ಲವಾ?" ಎಂದು ಕೇಳಿದರು. | 2 |
| 19 | ಕಾಡಿನ ನಾಶದೊಂದಿಗೆ ನೆಲೆ ಕಳೆದುಕೊಂಡಿದೆ. ಮರದಿಂದ ಮರಕ್ಕೆ ಹಾರುವಂತಿಲ್ಲ, ರಸ್ತೆ ದಾಟುವಾಗ ವಾಹನಕ್ಕೆ ಸಿಲುಕಿ ಅಂಗವಿಕಲಗೊಂಡಿದೆ. | 2 |

| | | |
|---|---|---|
| 20 | ಮುದ್ದಣ್ಣ ಮನೋರಮೆಗೆ ಶೃಂಗಾರರಸದಲ್ಲೋ, ವೀರರಸದಲ್ಲೋ, ಅಥವಾ ಹಾಸ್ಯರಸದಲ್ಲೋ ಯಾವ ರಸದಲ್ಲಿ ಹೇಳಲಿ ಎಂದು ಕೇಳುತ್ತಾನೆ. | 2 |
| 21 | ಪಟ್ಟಣದ ಹೋಟೆಲುಗಳಲ್ಲಿ ಭವ್ಯ ಕಟ್ಟಡ, ನಡೆದರೆ ಕಾಲು ಜಾರುವ ಫರಸಿಯ ನೆಲುವಿದೆ, ಕುರ್ಚಿ, ಫ್ಯಾನ್, ಟೇಬಲ್ಲು, ಶುಭ್ರವಸ್ತ್ರದ ಮಾಣಿ ಅದರಲ್ಲಿರುತ್ತಾರೆ. | 2 |
| 22 | ಕೃಷ್ಣೇಗೌಡನ ಆನೆ ಕಾಡಿನಲ್ಲಿ ಹುಟ್ಟಿ ಬೆಳೆದ ಆನೆಯಾಗಿದರೆ ಊರಿನ ಜನರ ನಡುವೆಯೇ ಬೆಳೆದು ಒಗ್ಗಿ ಹೋಗಿತ್ತು. ಅಂಗಡಿ ಬೀದಿಗಳಲ್ಲಿ ಬಾಳೇಗೊನೆಗಳ ದಿಂಡು, ಸಿಪ್ಪೆ, ಹಾಳಾದ ಹಣ್ಣುಗಳನ್ನು ಬೇಡಿ ತಿನ್ನುತ್ತಿತ್ತು. | 2 |
| 23 | ಇಪ್ಪತ್ತನಾಲ್ಕು ಗಂಟೆಯು ಕುಡಿದೇ ಇರುತ್ತಿದ್ದ ವೇಲಾಯುಧ ಮಠದ ಸಾತ್ವಿಕ ವಾತಾವರಣಕ್ಕೆ ದೊಡ್ಡ ತಲೆನೋವಾಗಿದ್ದ. | 2 |
| 24 | ಕೃಷ್ಣೇಗೌಡ ಮಠದಲ್ಲಿ ಬರಿ ಒಣಹುಲ್ಲು, ಮೊಸರನ್ನ ತಿಂದು ಸೊರಗಿದ್ದ ಆನೆಗೆ ಬಯನೆ ಸೊಪ್ಪು, ಹಸಿಹುಲ್ಲು, ಹಿಂಡಿ ಬೆಲ್ಲ, ಗೆಣಸು ಎಲ್ಲವನ್ನು ತಿನ್ನಿಸಿ ಪಗಡುದಸ್ತಾಗಿ ಸಾಕಿದನು. | 2 |
| 25 | ಶಿವೇಗೌಡರ ಸಾಮಿಲ್ಲಿನಲ್ಲಿ ಕಳ್ಳನಾಟ ಇಳಿಸುವಾಗ ರಾತ್ರಿಯ ವೇಳೆ ಕುಡಿದ ಮತ್ತಿನಲ್ಲಿದ್ದ ವೇಲಾಯುಧ ಲಾರಿ ಮತ್ತು ನಾಟಗಳಿಗೆ ಕಟ್ಟಿದ ಹಗ್ಗ ಬಿಚ್ಚದೆ ಇದ್ದುದರಿಂದ ನಾಟಾ ಸಮೇತ ಉರುಳಿ ಬಿದ್ದಾಗ ಕ್ಯಾಬಿನ್ನಿನ ಮೇಲಿದ್ದ ಮಣಭಾರದ ಜ್ಯಾಕ್ ದೊಪ್ಪನೆ ಡ್ರೈವರನ ತಲೆಬುರುಡೆ ಮೇಲೆ ಬಿದ್ದು ಅವನು ಪರಂಧಾಮಕ್ಕೆ ಹೋದ. | 2 |
| 26 | ನಮ್ಮ ಕರೆಂಟ್ ಡಿಪಾರ್ಟ್‌ಮೆಂಟಿನ ಲೈನ್‌ಮನ್ ಕೆಲಸಕ್ಕೆ ಸೇರಿದ ಯಾರು ಸರ್ವೀಸ್ ಮುಗಿಸಿ ರಿಟೈರಾಗಿಲ್ಲ. ಕರೆಂಟಿನ ಜೊತೆ ಕೆಲಸ ಅದು, ಒಂದಲ್ಲ ಒಂದಿನ ಎಚ್ಚರ ತಪ್ಪಿತೂ ಅಂದ್ರೆ ಅಲ್ಲಿಗೆ ನಮ್ಮ ಸರ್ವೀಸ್ ಮುಗಿದಂತೆಯೇ ಎಂದು ದುರ್ಗಪ್ಪ ವಿವರಿಸಿದನು. | 2 |
| | **ಕವಿ, ಪದ್ಯದ ಹೆಸರಿಗೆ ಒಂದು ಅಂಕ, ವಾಕ್ಯ ಬಳಕೆಯ ಸಂದರ್ಭದೊಂದಿಗೆ ಸ್ವಾರಸ್ಯಕ್ಕೆ 2 ಅಂಕ** | |
| 27 | ನಾಗಚಂದ್ರ – ಕದಡಿದ ಸಲಲಂ ತಿಳಿವಂದದೆ<br>ರಾವಣನಲ್ಲಿ ಸೀತೆಯ ಬಗ್ಗೆ ವೈರಾಗ್ಯಭಾವ ಮೂಡಿದ ಸಂದರ್ಭದಲ್ಲಿ ಕವಿಯು ಹೇಳಿದ ಮಾತು. ಕವಿಯು ರಾವಣನ ಮನಃಪರಿವರ್ತನೆಯನ್ನು ಹೊಗಳಿ ಅವನನ್ನು ಉದಾತ್ತನನ್ನಾಗಿ ಮಹಾನುಭಾವನನ್ನಾಗಿ ವರ್ಣಿಸಿರುವ ಪರಿ. | 3 |
| 28 | ಕುಮಾರವ್ಯಾಸ – ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ದ್ರೌಪದಿಯ ಹತಾಶೆಯಿಂದಭೀಮನಿಗೆ ನುಡಿಯುವ ಮಾತುಗಳಿವು. ಕೀಚಕನ ಉಪಟಳದಿಂದ ಪಾರು ಮಾಡೆಂದು ದ್ರೌಪದಿಯು ಭೀಮನನ್ನು ಅಂಗಲಾಚುತ್ತಾಳೆ. ಭೀಮನು ಧರ್ಮಜನ ಆಜ್ಞೆಯಲ್ಲಿರುವುದರಿಂದ ನಾನು ಅಸಹಾಯಕನೆಂದು ಹೇಳುತ್ತಾನೆ. ಆಗ ದ್ರೌಪದಿ "ನನ್ನಂತೆ ಭಂಗಕ್ಕೊಳಗಾದ ಯಾವ ನಾರಿಯರು ಈ ಭೂಮಿಯ ಮೇಲೆ ಹುಟ್ಟದಿರಲಿ, ಭೀಮನಂತಹ ಅಸಹಾಯಕ ಗಂಡಂದಿರು ಹುಟ್ಟದಿರಲಿ, ಎಂಬ ಸಂದರ್ಭವಿದು. | 3 |

| | | |
|---|---|---|
| 29 | ದ.ರಾ. ಬೇಂದ್ರೆಬೆಳಗುಜಾವ – ಬೆಳಕಿನ ಆಗಮನದ ವರ್ಣನೆಯ ಸಂದರ್ಭ. ಬೆಳಕಿನ ಬೇಟಗಾರ ಗುಡಿಗೋಪುರಗಳಿಗೆ ಬಲೆ ಬೀಸಿ ಬರುತ್ತಾನೆಂದು ಅದ್ಭುತವಾಗಿ ಕವಿ ವರ್ಣಿಸಿದ್ದಾರೆ. ಬಲೆ ಬೀಸಿದಾಗ ನಿಧಾನವಾಗಿ ಜಗಕೆ ಬೆಳಕು ಹಬ್ಬುವ ರೀತಿಯನ್ನು ಹೋಲಿಸಿರುವುದು ಸ್ವಾರಸ್ಯಕವಗಿದೆ. | 3 |
| 30 | ಹಾ.ಮಾ. ನಾಯಕ – ಕನ್ನಡವನ್ನು ಕಟ್ಟುವ ಕೆಲಸ<br>ಶಿಕ್ಷಣ ಮಾಧ್ಯಮದ ಬಗ್ಗೆ ಲೇಖಕರು ಚರ್ಚಿಸುತ್ತಾ ಈ ಮಾತುಗಳನ್ನಾಡಿದ್ದಾರೆ. ಶಿಕ್ಷಣ ಮಾಧ್ಯಮದ ವಿಚಾರವಾಗಿ ಪ್ರತಿಪಾದಿಸುವ ಲೇಖಕರು, ಕನ್ನಡ ಮಾಧ್ಯಮದ ಬಗ್ಗೆ ಡಾ. ಸಿ. ಎನ್. ಆರ್. ರಾವ್ ಉದಾಹರಣೆ, ಇಂಗ್ಲೀಷ್‌ನ್ನು ಕಲಿಸಿ, ನಮ್ಮ ಭಾಷೆಯಲ್ಲಿ ಎಲ್ಲ ವಿಷಯಗಳನ್ನು ಓದಬೇಕೆಂದೂ ಅದೇ ಮೈಗೆ ಹತ್ತುವುದೆಂದು ಹೇಳುವ ಸಂದರ್ಭ | 3 |
| 31 | ಪ್ರೊ. ಎಚ್. ಆರ್. ರಾಮಕೃಷ್ಣರಾವ್ ಬದುಕನ್ನು ಪ್ರೀತಿಸಿದ ಸಂತ ವಿಜ್ಞಾನ ತಂತಜ್ಞಾನಗಳ ಸಂಕೀರ್ಣ ಪ್ರಪಂಚದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಕಲಾಂರವರು ಯಾವುದೋ ಪ್ರಶಸ್ತಿ ಪುರಸ್ಕಾರ ಹಣ ಗಳಿಸಲಿಕ್ಕಲ್ಲವೆಂಬುದನ್ನು ವಿವರಿಸುತ್ತಾ "ಭಗವಂತನ ಸೃಷ್ಟಿಯಲ್ಲಿರುವವರೆಲ್ಲ ಆತನ ಬಂಧುಗಳೆ: ಯಾರು ಅವರುಗಳ ಸೇವೆ ಮಾಡುತ್ತಾರೋ ಅವರೇ ದೇವರಿಗೆ ಹತ್ತಿರವಾದವರು" ಎಂಬ ಬದುಕಿನ ಮಂತ್ರ ಕಲಾಂರವರದಾಗಿತ್ತು ಎಂದಿದ್ದಾರೆ. ಕಲಾಂರವರ ನಿಷ್ಕಾಮಕರ್ಮ ಜೀವನ ದೃಷ್ಟಿಗೆ ಹಿಡಿದ ಕನ್ನಡಿಯದು. | 3 |
| 32 | ಪೂರ್ಣಚಂದ್ರ ತೇಜಸ್ವಿ – ಕೃಷ್ಣೇಗೌಡನ ಆನೆ<br>ನಿರೂಪಕರು ತಮ್ಮ ಹಳೆಯ ಜೀಪಿನಡಿ ಮಲಗಿ ರೀಪೆರಿ ಮಾಡುತ್ತಿರುವಾಗ ಅಲ್ಲಿಗೆ ಬಂದ ದುರ್ಗಪ್ಪ ಅವರ ಗಮನ ಸೆಳೆಯಲು ಕೆಮ್ಮುತಾನೆ. ಇಲ್ಲಿ ಮನೆಯ ಬಳಿ ಬಂದವರು ಯಾರು ಕಣ್ಣಿಗೆ ಬೀಳದಿದ್ದಾಗ ಭಾಷಾಗೊದಲಗಳನ್ನು ನಿವಾರಿಸಿಕೊಳ್ಳಲು ಕೆಮ್ಮಿ ಕ್ಯಾಕರಿಸುತ್ತಾರೆ ಎಂದು ತಿಳಿಸಿದ್ದಾರೆ. | 3 |
| 33 | ಪೂರ್ಣಚಂದ್ರ ತೇಹಸ್ವಿ – ಕೃಷ್ಣೇಗೌಡನ ಆನೆ<br>ನಿರುಪಕರು ಖಾನ್ ಸಾಹೇಬರ ಬಳಿ ನೀವು ಕಂತ್ರಿನಾಯಿ ಹಾವಳಿಯ ಕಡೆ ಗಮನಹರಿಸಿ ಸರಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದಾಗ ಪ್ರೆಸಿಡೆಂಟ್ ಸಾಹೇಬರು 'ನಂಗೇನು ನಾಯಿಗಳನ್ನು ಕಂಡರೆ ಪ್ರೀತಿನಾ ಸ್ವಾಮಿ'. ಮೂಡಿಗೆರೆ ಒಳಗೆ ಇನ್ನೂ ತುಂಬಾ ಕಂತ್ರಿ ನಾಯಿಗಳಿರೋದು ನಿಜ. ಅವೆಲ್ಲಾ ಇಲ್ಲಿನ ನಾಯಿಗಳಲ್ಲ, ಹೊರಗಡೆಯಿಂದ ಎಕ್ಸಪೋರ್ಟ್ ಅದವು ಎಂದು ನಾಯಿಗಳ ಹೆಚ್ಚಳಕ್ಕೆ ಕಾರಣ ಹೇಳುತ್ತಾರೆ. | 3 |
| 34 | ನಮ್ಮನ್ನು ಕಾಯಬೇಕಾದವರೆ ಕೊಲ್ಲಲು ನಿಂತರೆ ಇನ್ಯಾರು ಕಾಯಲಾರರೆಂಬ ಸಂಗತಿಳನ್ನು ಬಸವಣ್ಣ ಹಲವು ನಿದರ್ಶನಗಳೊಂದಿಗೆ ಚಿತ್ರಿಸಿದ್ದಾರೆ. ನಾವು ನಿಂತ ನೆಲವೇ ಹೊತ್ತಿ ಹುರಿದರೆ ಕೆರೆಯ ಏರಿಯೇ ನೀರನೆಲ್ಲಕುಡಿದರೆ ಬೇಲಿಯೇ ಬೆಳೆಯನ್ನು ಮೇಯಿದ್ದಾರೆ ಮನೆಯನ್ನು ಕಾಯಬೇಕಾದ ಗೃಹಿಣಿ ತಾನೇ ಕದ್ದರೆ, ತಾಯಿಯ ಎದೆ ಹಾಲು ವಿಷವಾದರೆ ಅರ್ಥಾತ್ ರಕ್ಷಿಸ ಬೇಕಾದವರೆ ಭಕ್ಷಕರಾದರೆ ಒದಗುವ ವಿಘಟನೆಯನ್ನು ಇಲ್ಲಿಚಿತ್ರೀಸಲಾಗಿದೆ. | 4 |

| | | |
|---|---|---|
| 35 | ಮೊದಲನೆಯದಾಗಿ ಪಾಪಿ ಕೌರವನು ದ್ಯೂತ ಪ್ರಸಂಗದಲ್ಲಿ ಅವಳ ಮುಂದಲೆ ಹಿಡಿದು ಎಳೆತರಿಸಿ ದುಶ್ಯಾಸನನಿಂದ ವಸ್ತ್ರಾಪಹರಣ ಮಾಡಿಸಿರುತಾನೆ. ಎರಡನೆಯದು ಅರಣ್ಯವಾಸದಲ್ಲಿ ಸೈಂಧವನು ದ್ರೌಪದಿಯನ್ನು ಅಪಹರಿಸಿಕೊಂಡು ಹೋಗಿ ಅವಮಾನಿಸಿರುತ್ತಾನೆ. ಮೂರನೆಯದು ಕೀಚಕನು ರಾಜಸಭೆಯಲ್ಲೇ ದ್ರೌಪದಿಯನ್ನು ಅವಳ ಗಂಡಂದಿರ ಎದುರೇ ಎಡಗಾಲಿನಿಂದ ಒದ್ದು ಬೀಳಿಸಿದ ಅಪಮಾನ. ಈ ಮೂರು ಅಪಮಾನದ ಪ್ರಸಂಗಗಳಲ್ಲಿಯೂ ದ್ರೌಪದಿಯು ಸಂಕಟವನ್ನು ಅನುಭವಿಸಿರುತ್ತಾಳೆ. | 4 |
| 36 | ಶತ್ರುಗಳನ್ನು ಎದುರಿಸಿ ಹೋರಾಡಿ ಕೊಲ್ಲಬಲ್ಲ ಸಾಮರ್ಥ್ಯ ವೀರನಾಗಿರಬೇಕು. ಪ್ರಪಂಚವನ್ನು ಅರಿತವನು ಮತ್ತು ಚತುರತೆಯನ್ನು ಹೊಂದಿದವನು ತಂತ್ರ–ಪ್ರತಿತಂತ್ರತಗಳನ್ನು ಅರಿತವನು ಮಂತ್ರಿಯಾಗಬೇಕು. ರಾಜನಿಗೆ ಕ್ರೋಧಗುಣವಿರಬಾರದು, ಶಾಂತಿ, ಕ್ಷಮೆ, ದಯಾಗುಣಗಳಿರಬೇಕು. ಯೋಗಿಯಾದವನು ಅರಿಷಡ್ವರ್ಗಗಳನ್ನು ಗೆದ್ದವನಾಗಿರಬೇಕು, ಚಿತ್ತವೃತ್ತಿ ನಿರೋಧ, ಇಂದ್ರಿಯನಿಗ್ರಹವುಳ್ಳವನಾಗಿರಬೇಕು. | 4 |
| 37 | ಬುದ್ಧಿವಂತರ ನೆರೆಯಿರಬೇಕು. ಅಕ್ಕಪಕ್ಕದಲ್ಲಿ ಬುದ್ಧಿವಂತರಿದ್ದರೆ, ಒಳ್ಳೆಯವರಿದ್ದರೆ ನಾವೂ ಅವರಂತೆ ಬದ್ಧಿವಂತಿಕೆಯನ್ನು ರೂಢಿಸಿಕೊಳ್ಳಬಹುದು. ಹಾಗಲ್ಲದೆ ನೆರೆಯಲ್ಲಿ ದುಷ್ಟರು, ಕುಲಗೇಡಿಗಳಿದ್ದಲ್ಲಿ ನಾವು ಇರುವ ಬುದ್ದಿಯನ್ನು ಕಳೆದುಕೊಂಡು ಅವರ ಗುಣಗಳನ್ನೇ ಕಲಿತುಕೊಳ್ಳಬಹುದು. ಆದ್ದರಿಂದ ನಾವು ವಾಸಿಸುವ ಪರಿಸರದಲ್ಲಿ ಬುದ್ದಿವಂತರ ನೆರೆಯಿರುವುದು ಮುಖ್ಯವೆಂದು ಜನಪದರು ತಿಳಿಯಹೇಳಿದ್ದಾರೆ. | 4 |
| 38 | ಬಸಲಿಂಗನಿಗೆ ಅದು ಪುರುಸೊತ್ತಿಲ್ಲದ ಕಾಲ. ನಾಲ್ಕು ದಿನ ತಡಮಾಡಿದರೆ ಕುಳ ನೆಲದಲ್ಲಿ ನಾಟುವುದಿಲ್ಲ. ಇರುವ ಎರಡು ಎತ್ತುಗಳಲ್ಲಿ ಒಂದು ನೊಗ ಇಟ್ಟೊಡನೆ ಮಲಗಿ ಬಿಡುತ್ತದೆ ಇನ್ನೊಂದು ಅದರಂತೆ ಆಗುವ ಸೂಚನೆಗಳಿವೆ ಹಾಗಾಗಿ ಯಾರಿಗಾದರೂ ಸಾಟಿಯಲ್ಲಿ ಕೊಟ್ಟು ಬೇರಯವರನ್ನು ತರಬೇಕೆಂದು ಯೋಚಿಸುತ್ತಿದ್ದನು. ಈ ನಡುವೆ ಮಗುವಿಗೆ ಮೈ ಸರಿಯಿಲ್ಲ ಶಿವನೂರು ಸ್ವಾಮಿಗಳಿಗೆ ತೋರಿಸಬೇಕೆಂದು ಹೆಂಡತಿ ಸಿದ್ಲಿಂಗಿ ಹೇಳುತ್ತಿದ್ದಳು. ಎತ್ತುಗಳ ಸಾಟಿಮಾಡಲು ಹೇಳಬೇಕಾದ ಸುಳ್ಳು,ಅದಕ್ಕೆ ಬೇಕಾದ ಛಾತಿ ಮಾತಿಗಾರಿಕೆ ಅವನಲ್ಲಿರದೆ ಇದ್ದುದು ಸಮಸ್ಯೆಯಾಗಿತ್ತು. ಈ ಎಲ್ಲದರ ನಡುವೆ ಬಸಲಿಂಗನ ಎಡಗಣ್ಣಿನಲ್ಲಿ ನೋವು ಕಾಣಿಸಿಕೊಂಡು ದಿನೆ ದಿನೇ ಹೆಚ್ಚಾಗುತ್ತಲೆ ಹೋಯಿತು. | 4 |
| 39 | ಕಮಲಾ ಮೇಡಂಗೆ ಮೂತ್ರಪಿಂಡದಲ್ಲಿ ಕಲ್ಲು ಮೂಡಲು ಕಾರಣವೆಂದರೆ ಅವರ ಶಾಲೆಯಲ್ಲಿ ಮಹಿಳೆಯರಿಗೆ ಶೌಚಾಲಯ ಇರಲಿಲ್ಲ ಆದ್ದರಿಂದ ಅವರು ಶಾಲೆಗೆ ಹೊರಟು ಮತ್ತೆ ಸಂಜೆ ಮನೆಗೆ ಹಿಂದುರುಗಿ ಬರುವ ವರೆಗು ಜಲ**ಭಾ**ದೆಗೆ ಹೋಗುತ್ತಿರಲಿಲ್ಲ. ಹಾಗೆಯೇ ನೀರು ಕುಡಿದರೆ ಶೌಚಾಲಯಕ್ಕೆ ಹೊಗಬೇಕಾಗುತ್ತದೆ ಎಂದು ಹೆದರಿ ನೀರು ಕುಡಿಯುವದನ್ನೆ ಬಿಟ್ಟಿದ್ದರು. ಒಂದು ದಿನ ಹೆರಿಗೆ ನೋವನ್ನು ಮೀರಿಸಿದ ನೋವಿನಿಂದ ಬೊಬ್ಬೆಯಿಟ್ಟು ವೈದ್ಯರಲ್ಲಿ ಪರಶೀಲಿಸಿದಾಗ ಮೂತ್ರಪಿಂಡದಲ್ಲಿ ಕಲ್ಲಿರುವುದು ತಿಳಿದುಬಂದಿತು | 4 |
| 40 | ತೋಟದ ಅಂಚು ಮೆತ್ತಗಾಗಿರುವುದನ್ನು ಅರಿಯದೆ ಅಲ್ಲೆ ಕುಳಿತು ಮುಸುರೆ ಪಾತ್ರೆ ತೊಳೆಯುತ್ತ ತಾನು ಕೇಳಿದ್ದ ಹರಿಕಥೆಯ ಉಪಕಥೆಗಳನ್ನು ನೆನಪಿಸಿಕೊಳ್ಳುತ್ತಿರುವಾಗ ಕಾಲಡಿಯ ಮಣ್ಣು ಕುಸಿದು ಗುಡ್ಡನ ಸಮೇತ ಪಾತ್ರೆ | 4 |

| | | |
|---|---|---|
| | ಸೌಟು ತಪ್ಪಲೆ ಬೆಳ್ಳಿ ಲೋಟ ಎಲ್ಲಾವು ನೀರು ಪಾಲಾದವು.ಗುಡ್ಡ ಈಜಿಕೊಂಡು ಮೇಲೆಬಂದವನು ತನ್ನಪ್ಪ ಕುದುಪನತ್ತ ಧಾವಿಸಿ ಸಂಗತಿಯನ್ನು ತಿಳಿಸಿದ. ದಣಿಗಳಿಗೆ ಈ ವಿಚಾರ ತಿಳಿದರೆ ಸಿಟ್ಟಿನ ಭರಕ್ಕೆ ತಾವೆಲ್ಲರು ಹೊಳೆಯ ಪಾಲಾಗುವುದು ಖಂಡಿತ ಎಂದು ಭಾವಿಸಿದ ಕುದುಪ ಕೋಮಣಾಲಂಕೃತನಾಗಿ ಹೊಳೆಯಲ್ಲಿ ಮುಳಗಿ ನೆಲಕಚ್ಚಿರುವ ಪಾತ್ರೆಗಳನ್ನು ಜಾಲಾಡಿ ಕುಸಿದ ಮಣ್ಣಿನಡಿಯಲ್ಲಿ ಸಿಗುವಷ್ಟು ಪಾತ್ರೆಗಳನ್ನು ಮೇಲೆತ್ತಿದ್ದನು .ಆದರೆ ಏನೂ ಮಾಡಿದರು ದಣಿಗಳ ಮನೆಯ ಬೆಳ್ಳಿಲೋಟ ಸಿಗಲಿಲ್ಲ. | |
| 41 | ಕೊಡಲಿಯಾದರೊ ಸುಳ್ಳು ಹೇಳಿ ಕದ್ದುಕೊಂಡು ಹೋಗಬೇಕಾದಷ್ಟು ಅಮೂಲ್ಯವಾದುದ್ದೇನು ಆಗಿರಲಿಲ್ಲ.ಆ ಕೊಡಲಿಯನ್ನು ಕೆರೆ ಕೆಲಸಕ್ಕೆ ಬಂದಿದ್ದ ಮಣ್ಣು ಒಡ್ಡರು ತೆಗೆದುಕೊಂಡು ಹೋಗಿ ಅಗೆಯುವಾಗ ಯಾರ್‍ರಾಬಿರ್‍ರಿ ಜಬ್ಬಿ ಅದರ ಆಕಾರ ಸುತ್ತಿಗೆಯಂತೆ ಕಾಣುತ್ತಿದ್ದು ಅದರಲ್ಲಿ ದುರ್ಗಪ್ಪ ಹೇಗೆ ಮರಕಡಿಯುತ್ತಾನೊ ಎಂಬ ಅನುಮಾನ. ಏನೆ ಇರಲಿ ಅವನೆ ಹುಡುಕಿ ತೆಗೆದುಕೊಂಡು ಹೋಗಿದ್ದರಿಂದ ಮೊಂಡುಕೊಡಲಿ ಕೊಟ್ಟಿದ್ದಕ್ಕೆ ನಿರೂಪಕರನ್ನು ದೂಷಿಸುವಂತೆ ಇರಲಿಲ್ಲ. ಆದ್ದರಿಂದ ಅವನು ಕದ್ದರೂ ದುಃಖ ವಾಗುತ್ತಿರಲಿಲ್ಲ. ಹಾಗಾಗಿ ದುರ್ಗಪ್ಪನನ್ನು ಹುಡುಕಿ ಕೊಡಲಿ ವಸೂಲಿಮಾಡುವ ಗೋಜಿಗೆ ಹೊಗಲಿಲ್ಲ | 4 |
| 42 | ಪಿಡಬ್ಲ್ಯುಡಿನವರು ಕರೆಂಟಿನವರು ಟೆಲಿಪೋನಿನವರು ಅರಣ್ಯ ಇಲಾಖೆಗೆ ನಂಬರ್ ಒನ್ ಎನಿಮಿಗಳು. ರಸ್ತೆಗೆ ಟಾರು ಹಾಕಲು ರಸ್ತೆಯ ಮರವನ್ನೆಲ್ಲ ಕಡಿದು ಟಾರುಕಾಯಿಸಿಕೊಳ್ಳುವ ಪಿಡಬ್ಲ್ಯುಡಿನವರು ಕರೆಂಟಿನವರು ಟೆಲಿಪೋನಿನವರು ಲೈನ್ ಎಳೆಯೋದಕ್ಕೆ ಪಾರೆಸ್ಟ್ ಕ್ಲಿಯರ್ ಮಾಡುತ್ತಿವಿ ಅಂತ ಎಲ್ಲೆಂದರಲ್ಲಿ ಸಾವಿರಾರು ಎಕರೆ ಕಾಡು ಕಡಿದು ಹಾಳುಮಾಡಿದ್ದು ಈಗ ಹಳ್ಳಿ ಹಳ್ಳಿಗೆ ಕರೆಂಟ್ ಕೊಡಬೇಕಂತ ಸರ್ಕಾರ ಪಾಲಿಸಿ ಮಾಡಿರುವುದರಿಂದ ಲೈನ್ ಕ್ಲಿಯರ್ ಮಾಡೋ ನೆಪದಲ್ಲಿ ಇವರ್‍ಯಾರು ಮನೆಗೆ ಸೌದೆ ಕೊಳ್ತಾನೆ ಇಲ್ಲ–ಇವರನ್ನು ಹೀಗೆ ಬಿಟ್ಟರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್ ಬಾಗಿಲು ಮುಚ್ಚಬೇಕಾಗುತ್ತೆ ಇವರಿಗೆ ಸರಿಯಾಗಿ ಬುದ್ದಿಕಲಿಸಬೇಕು | 4 |
| 43 | ನಾಗರಾಜನ ನಿಗೂಢ ಸಾವಿನ ಬಗ್ಗೆ ಊಹಾಪೋಹಗಳು ಹರಡುತ್ತವೆ.ಪೋಲಿಸರು ಕಾಡಿನಲ್ಲಿ ಹುಡುಕಾಡಿ ಕೊನೆಗೆ ಕೋವಿ ಸಿಕ್ಕಿದೆ ಹೆಣ ಸಿಕ್ಕಿಲ್ಲ ಎಂದು ಮಹಜರು ಬರೆದುಕೊಂಡರು . ನಾಗರಾಜನಿಗೆ ಇದ್ದಕ್ಕಿದಂತೆ ಮನಪರಿವರ್ತನೆಯಾಗಿ ಕೋವಿ ಎಸೆದು ದರ್ಮಸ್ಥಳದ ಬಸ್ಸು ಹತ್ತಿದನೆಂದು, ತಲೆಬೋಳಿಸಿಕೊಂಡು ಓಡಾಡುತ್ತಿರುವುದನ್ನು ತಾವು ಕಣ್ಣಾರೆ ಕಂಡವೆಂದು ಕೆಲವರು ಹೇಳಿದರು ಮತ್ತೆ ಕೆಲವರು ಆತ ಸಭೆಯಲ್ಲಾದ ಅವಮಾನ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವನೆಂದು –ಕಳ್ಳಸಾಗಣೆದಾರ ಗಂಗಾಧರನ ಗ್ಯಾಂಗೆ ಅವನನ್ನು ಕೊಲೆ ಮಾಡಿ ಹೆಣ ನಾಪತ್ತೆಮಾಡಿರಬೇಕೆಂದು ಈಗೆ ನಾನಾ ಊಹಾಪೋಹಗಳು ಹರಡಿದವು | 4 |
| 44 | ಕವಿಕೃತಿಪದ್ಯ – 1 ಅಂಕ, ಹಿನ್ನೆಲೆ ಸಂದರ್ಭ–1ಅಂಕ, ಭಾವಾರ್ಥ–2ಅಂಕ, ಸ್ವಾರಸ್ಯ–1 ಅಂಕ<br><br>ನಾಗಚಂದ್ರ–ಪಂಪ ರಾಮಾಯಣ–ಕದಡಿದ ಸಲಿಲಂ ತಿಳಿವಂದದೆ | 5 |

| | | |
|---|---|---|
| | ರಾವಣನು ಬಹುರೂಪಿಣಿ ವಿದ್ಯೆಯ ಸಿದ್ದಿಯ ನಂತರ ಸೀತೆಯ ಬಳಿಬಂದು, ರಾಮನ ಆಸೆಯನ್ನು ತೊರೆದು ತನಗೆ ಒಲಿಯಬೇಕೆಂದು ಹೇಳುವ ಸಂದರ್ಭ. ತಲ್ಲಣಗೊಂಡ ಸೀತೆ ರಾವಣನಿಗೆ ಕರುಣಿಸುವುದಾದರೆ ಎಲೈ ರಾವಣನೆ ರಘುರಾಮನ ಆಯಸ್ಸು ಪ್ರಾಣ ಇರುವವರೆಗು ನನ್ನ ಹತ್ತಿರ ಸುಳಿಯಬೇಡ ಎಂದು ಹೇಳುತ್ತಲೆ ಮೂರ್ಛೆಗೊಂಡು ಬೀಳುತ್ತಾಳೆ. ಸೀತೆಯ ದುಃಖ ಅಸಹಾಯಕತೆ ತಲ್ಲಣಗಳು ಇಲ್ಲಿ ಹೊರಹೊಮ್ಮಿದೆ | |
| | ಅಥವಾ | |
| | ನಿಸಾರ್ ಅಹಮದ್– ಶಿಲುಬೆ ಏರಿದ್ದಾನೆ<br><br>ಜಗತ್ತಿಗೆ ಪ್ರೀತಿ ದಯೆ ಕರುಣೆಯ ಸಂದೇಶಗಳನ್ನು ಸಾರಿದ ಜೀಸಸ್ ನ ಸಾವಿನ ಸಂದರ್ಭವನ್ನು ಇಲ್ಲಿ ಕಣ್ಣೆದುರು ತಂದಿವೆ. ಏಸುವನ್ನು ಶಿಲುಬೆಗೇರಿಸಲು ಆಗ್ರಹಿಸಿದ ರೋಂನ ಯಾಜಕರು ಆ ಪವಿತ್ರ ದಿನದಂದು ಕೊಲೆಗಡುಕ ಬರಬ್ಬನನ್ನು ಕ್ಷಮಿಸಲು ಆಗ್ರಹಿಸುತ್ತಾರೆಯೆ ವಿನಹ ಜೀಸಸ್‌ನನ್ನು ಕ್ಷಮಿಸಲು ಒಪ್ಪುವುದಿಲ್ಲ. ಇವರ ಒತ್ತಡಕ್ಕೆ ಮಣಿದು ಇಬ್ಬರು ಕಳ್ಳರ ಮದ್ಯೆ ಗಲ್ಲಿಗೇರಿಸಲಾಯಿತು. ನೋವಿನ–ಸಾವಿನ ಸಮಯದಲ್ಲೂ ಒಳ್ಳೆಯ ಮಾತುಗಳನ್ನು ಹಾಡಬಲ್ಲ ಮುಖಮುದ್ರೆಯೊತ್ತ ಏಸುವಿನ ಅಪರೂಪದ– ಅಪೂರ್ವದ ವ್ಯಕ್ತಿತತ್ವವನ್ನು ಇಲ್ಲಿ ಕಾಣಬಹುದು | 5 |
| 45 | ಬಟ್ಟೆ–ದಾರಿ, ವಸ್ತ್ರ<br><br>ಕಳೆ–ಕಾಂತಿ,ನಷ್ಟ , ತ್ಯಾಜ್ಯಗಿಡ<br><br>ನೆನೆ–ಸ್ಮರಣೆ,ಒದ್ದೆ | 2 |
| 46 | ವೈಶಾಖ –ಬೇಸಗೆ<br><br>ವೀರ–ಬೀರ<br><br>ಘೂಕ–ಗೂಗೆ | 2 |
| 47 | ಕುಣಿಯುತ್ತಿತ್ತು–ಕುಣಿ<br><br>ಕರೆವರು–ಕರೆ<br><br>ಹಾಡಿದಳು–ಹಾಡು | 2 |
| 48 | ದ್ವಿರುಕ್ತಿ : ವಿದ್ಯಾರ್ಥಿಗಳ ವಿವೇಚನೆಗೆ | 2 |
| 49 | ಮರಿಗೂಗೆ–ಮರಿ<br><br>ಘೋರಪಾತಕಿ–ಘೋರ<br><br>ಕಿರುಹಾದಿ–ಕಿರು | 2 |
| 50 | ವಾಕ್ಯರಚನೆ:ವಿದ್ಯಾರ್ಥಿಗಳ ವಿವೇಚನೆಗೆ | 2 |
| 51 | ಕದಡಿದ–ಷಷ್ಟಿವಿಭಕ್ತಿ<br><br>ಬಸ್‌ಸ್ಟಾಪಿನಲ್ಲಿ–ಸಪ್ತಮಿವಿಭಕ್ತಿ | 2 |

| | | |
|---|---|---|
| | ಚಂದಪ್ಪನನ್ನು –ದ್ವಿತೀಯ ವಿಭಕ್ತಿ | |
| 52 | ಪ್ರಬಂಧ ರಚನೆ<br><br>(ಪೀಠಿಕೆ =1–ಅಂಕ, ವಿಷಯ ಪ್ರತಿಪಾದನೆ–3 –ಅಂಕ, ಮುಕ್ತಾಯ 1–ಅಂಕ)<br><br>(ಭಾಷೆ,ವಿಷಯದ ಮಹತ್ವವನ್ನು ಸಂಕ್ಷಿಪ್ತವಾಗಿ ಒತ್ತಿಹೇಳುವ ಬರವಣಿಗೆ<br><br>ಶೈಲಿ,ತರ್ಕಬದ್ಧವಾದ ಮಂಡನೆ,ಉದ್ದರಣಗಳು,ಪ್ರತಿಪಾದನಾ ಕೌಶಲ ಇವುಗಳನ್ನು ಗಮನಿಸಿ ಮೌಲ್ಯಮಾಪಕರು ತಮ್ಮ ವಿವೇಚನಾನುಸಾರ ಅಂಕ ನೀಡುವುದು | 5 |
| 53 | ಪತ್ರಲೇಖನ<br><br>(ಪತ್ರದ ಪ್ರಾರಂಭ–1 ಅಂಕ, ಸಂಬೊಧನೆಯೊಂದಿಗೆ ವಿಷಯ ವಿವರಣೆ–2 ಅಂಕ)<br><br>ವಿಳಾಸ,ದಿನಾಂಕ,ಸೂಕ್ತ ಸಂಬೊಧನೆ,ಪತ್ರದ ಒಡಲು, ಆತ್ಮಿಯ<br>ನಿರೂಪಣೆ,ಗೌರವಪೂರ್ವಕ ಮುಕ್ತಾಯ ಇತ್ಯಾದಿಗಳನ್ನು ಗಮನಿಸಿ ಅಂಕ<br>ನೀಡುವುದು | 4 |
| 54 | (ಗಾದೆಯ ಅರ್ಥ, ಮಹತ್ವ–1 ಅಂಕ , ದೃಷ್ಟಾಂತಗಳೊಂದಿಗೆ ಗಾದೆಯ<br>ವಿಸ್ತರಣೆ–2 ಅಂಕ ಆಶಯ ಮತ್ತು ಪ್ರಸ್ತುತತೆಯೊಂದಿಗೆ ಮುಕ್ತಾಯ– ಅಂಕ | 4 |